ಬಿ.ಡಿ.ಎ. ನಿಂದ ಸರ್ಕಾರವು ಯಾವ ಹಣವನ್ನು ಸಾಲವಾಗಿ ಪಡೆದಿಲ್ಲ.
-ಉದ್ಭವಿಸುವುದಿಲ್ಲ-
-ಉದ್ಭವಿಸುವುದಿಲ್ಲ-
ರೂ. ೨೭.೫೪ ಕೋಟಿ.
-ಉದ್ಭವಿಸುವುದಿಲ್ಲ-

ವಿಷಯ:- ಬಸವಕಲ್ಯಾಣದಲ್ಲಿ ಕ್ರೀಡಾಂಗಣ ನಿರ್ಮಾಣ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೩೭:- (೪೭೭)
ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ)
ಮಾನ್ಯ ಯುವಜನಸೇವಾ ಕ್ರೀಡೆ ಮತ್ತು ದೈಹಿಕ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಸರ್ಕಾರವು ಕೈಗೆತ್ತಿ ಕೊಂಡಿದೆಯೇ?
ಆ) ಇಲ್ಲದಿದ್ದಲ್ಲಿ ಬಸವಕಲ್ಯಾಣದ ಯುವಜನತೆಗೆ ಕ್ರೀಡಾಂಗಣವಿಲ್ಲದೆ ಬಹಳ ತೊಂದರೆಯಾಗುವುದಿಲ್ಲವೆ?
ಇ) ಯಾವುದಾದರೂ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೆ?
ಈ) ಹಾಗಿದ್ದಲ್ಲಿ ಎಷ್ಟು ಎಕರೆ?
ಉ) ೧೯೯೨-೯೩ರಲ್ಲಿ (ಡಿಸೆಂಬರ್ ೯೨ರವರೆಗೆ) ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ?
ಊ) ಕ್ರೀಡಾಂಗಣವು ಯಾವಾಗ ಮುಕ್ತಾಯಗೊಳ್ಳುವುದು?

ಡಾ: ಡಿ. ಪ್ರೇಮಚಂದ್ರ ಸಾಗರ್
(ಯುವಜನ ಸೇವೆ ಕ್ರೀಡಾ ಹಾಗೂ ದೈಹಿಕ ಶಿಕ್ಷಣ ಸಚಿವರು)

ಇಲ್ಲ.
ಹೌದು.
ಇಲ್ಲ.
ಇಲ್ಲ.
ಉದ್ಭವಿಸುವುದಿಲ್ಲ.
ಉದ್ಭವಿಸುವುದಿಲ್ಲ.

ವಿಷಯ:- ಕನ್ನಡ ಆಡಳಿತ ಭಾಷೆಯಾಗಿ ಜಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೩೮:- (೪೯೯)
ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಚಿವಾಲಯದ ಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ಕನ್ನಡವನ್ನು ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಜಾರಿಗೆ ತರಲಾಗಿದೆಯೇ?
ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು?
ಇ) ಈ ದಿಸೆಯಲ್ಲಿ ಅನೇಕ ಸರ್ಕಾರಿ ಆಜ್ಞೆಗಳನ್ನು ಹೊರಡಿಸಿದಾಗ್ಯೂ, ಇದುವರೆವಿಗೂ ಕನ್ನಡವನ್ನು ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಜಾರಿಗೆ ತರದಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸದಿರಲು ಕಾರಣವೇನು?

ಈ) ಎಷ್ಟು ಸಮಯದೊಳಗಾಗಿ ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ತರಲಾಗುತ್ತಿದೆ.
ಉದ್ಭವಿಸುವುದಿಲ್ಲ.
ಕ್ರಮ ಕೈಗೊಳ್ಳಲಾಗುವುದು.
ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ.

ವಿಷಯ:- ಸಾರ್ವಜನಿಕ ಕುಂದುಕೊರತೆಗಳ ವಿಭಾಗದಿಂದ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೯:- (೫೦೦)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಚಿವಾಲಯದಲ್ಲಿ ಸಾರ್ವಜನಿಕ ಕುಂದುಕೊರತೆಗಳ ವಿಭಾಗವು ಪ್ರಾರಂಭವಾದಗಿನಿಂದ ಇಲ್ಲಿಯವರೆಗೆ ಎಷ್ಟು ಮನವಿಗಳನ್ನು ಸ್ವೀಕರಿಸಲಾಗಿದೆ.
ಆ) ಆ ಮನವಿಗಳ ಪೈಕಿ ಎಷ್ಟನ್ನು ಇತ್ಯರ್ಥಗೊಳಿಸಿ ಪರಿಹಾರ ಕಲ್ಪಿಸಲಾಗಿದೆ. (ಪರಿಹಾರ ಪಡೆದವರ ಪೂರ್ಣ ಮಾಹಿತಿ ನೀಡುವುದು)
ಇ) ಆ ಮನವಿಗಳ ಪೈಕಿ ಎಷ್ಟು ಇತ್ಯರ್ಥವಾಗದೆ ಹಾಗೆ ಉಳಿದಿವೆ ಹಾಗೂ ಅದಕ್ಕೆ ಕಾರಣಗಳೇನು?

ಶ್ರೀ ಪೆರಿಕಲ್ ಎಂ. ಮಲಪ್ಪ.
(ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ಸಚಿವರು)

ಸಾರ್ವಜನಿಕ ಕುಂದುಕೊರತೆ ವಿಭಾಗವು ದಿನಾಂಕ ೧-೭-೮೩ರಿಂದ ಅಸ್ತಿತ್ವಕ್ಕೆ ಬಂದಿದ್ದು, ನಿಯಾಮಾನುಸಾರ ಈ ವಿಭಾಗದಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಪ್ರತಿ ೧೩ ತಿಂಗಳಿಗೊಂದು ಬಾರಿ ಎಲ್ಲಾ ಕಡತಗಳನ್ನು ವಿಲೇ ಮಾಡಲಾಗುತ್ತಿದೆ. ಅಲ್ಲದೆ ಈ ವಿಭಾಗವನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ ೪೫ ಎಎಆರ್ ೯೦(೧) ದಿನಾಂಕ ೨೧-೫-೯೦ರಲ್ಲಿ ರದ್ದು ಮಾಡಿ ದಕ್ಷತೆ ಪರಿಶೋಧನೆ ಮತ್ತು ಜಾಗೃತ ವಿಭಾಗದಲ್ಲಿ ವಿಲೀನಗೊಳಿಸಿದ್ದು ತದನಂತರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ ೧೫ ಎಸ್‌ಇಎಂ ೯೨ ದಿನಾಂಕ ೩೦-೭-೯೨ರಲ್ಲಿ ಪುನರ್ ಚಾಲನೆಗೊಳಿಸಿದೆ. ಜನವರಿ ೯೨ ರಿಂದ ಡಿಸೆಂಬರ್ ೯೨ರವರೆಗೆ ೪೯೪೪ ಅರ್ಜಿಗಳನ್ನು ಸ್ವೀಕರಿಸಿದೆ.

ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ೪೧೬೫೫ (ಜನವರಿ ೯೨ ರಿಂದ ಡಿಸೆಂಬರ್ ೯೨ರವರೆಗೆ)

ಡಿಸೆಂಬರ್ ೧೯೯೨ರ ಅಂತ್ಯಕ್ಕೆ ೧೬೨೨ ಪ್ರಕರಣಗಳು ಬಾಕಿ ಇರುತ್ತವೆ. ಈ ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಗಳಿಂದ ಉತ್ತರ ಬರಬೇಕಾಗಿರುತ್ತದೆ.
ಇಲಾಖೆಗಳಲ್ಲಿ ಪ್ರಕರಣಗಳು ಇತ್ಯರ್ಥವಾಗದೆ ಉಳಿದಿರುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಕೆಲವು ಈ ಕೆಳಕಂಡಂತೆ ಪಟ್ಟಿ ಮಾಡಿದೆ.